# ಔಷಧೀಯ ಗುಣಗಳ ಆರತಿ ಕುಂಡಿಗೆ

ಸೆಪ್ಟೆಂಬರ್‌ನಿಂದ ಡಿಸೆಂಬರ್‌ವರೆಗೂ ಚಿತ್ತಾಕರ್ಷಕ ಬಿಳಿ ವರ್ಣದ ಹೂವು ಬಿಡುವ ಈ ಸಸ್ಯದ ಗಡ್ಡೆ ಔಷಧವಾಗಿ, ಎಲೆ ಆಹಾರವಾಗಿಯೂ ಬಳಕೆಯಲ್ಲಿದೆ.

ಚಿತ್ರ-ಲೇಖನ: ಜಿ.ಎಂ. ಹೆಗಡೆ, ತಾರಗೋಡು

ನಮ್ಮ ಪರಿಸರದಲ್ಲಿನ ಸಸ್ಯಗಳ ಬಗ್ಗೆ ಕೇಳಿ ನೋಡಿ ತಿಳಿದುಕೊಳ್ಳುವ ಕುತೂಹಲ. ನಗರದ ಗದ್ದಲದಿಂದ ಬಿಡುವು ಮಾಡಿಕೊಂಡು ನಮ್ಮ ಹಳ್ಳಿಯತ್ತ ಕಾಲಿರಿಸಿದೆ. ಅಲ್ಲಿ ನಮ್ಮ ಮಿತ್ರರೊಬ್ಬರಿಂದ ಸಸ್ಯ ಮೂಲದ ಪರಿಚಯವನ್ನು ಹುಡುಕುತ್ತಿರುವ ಸಮಯದಲ್ಲಿ ನಮ್ಮ ಕಣ್ಣಿಗೆ ಗೋಚರಿಸಿದ್ದು ಸುಂದರವಾದ ಶ್ವೇತವರ್ಣದ ಚಿತ್ತಾಕರ್ಷಕ 'ಆರತಿ ಕುಂಡಿಗೆ'. ಮನೆಯಂಗಳದಲ್ಲಿ ಪೊದೆಯಾಕಾರದಲ್ಲಿ ಹಸಿರು ಹೊನ್ನಿನ ಈ ಗಿಡ ಬೆಳೆದು ನಿಂತಿತ್ತು.

ಮಿತ್ರ ಶ್ರೀಪಾದರು ಈ ಗಿಡದ ಪರಿಚಯ ಹಾಗೂ ಉಪಯುಕ್ತತೆಯ ಬಗ್ಗೆ ವಿವರಿಸಿದರು. ಬೆಣ್ಣೆ ಕುಂಡಿಗೆ, ಆರತಿ ಕುಂಡಿಗೆ ಎಂದು ಗ್ರಾಮ್ಯ ಭಾಷೆಯಲ್ಲಿ ಕರೆಯುವರು. ಶಾಸ್ತ್ರೀಯವಾಗಿ 'ಚಂಗಲಕೋಷ್ಠ' ಎನ್ನುವರು.

ಬಾಳೆಗೊನೆ ತುದಿಯಲ್ಲಿರುವ ಕುಂಡಿಗೆಯ ಆಕಾರದಲ್ಲಿ ಇದರ ಹೂಗಳಿರುವುದು. ಈ ಕಾರಣದಿಂದಾಗಿ ಇದರ ಪುಷ್ಪಮಂಜರಿಗೆ ಕುಂಡಿಗೆ ಗಿಡ, ಆರತಿ ಕುಂಡಿಗೆ ಎಂದು ಕರೆಯುವ ವಾಡಿಕೆ ಇದೆ. ನಿತ್ಯ ಹರಿದ್ವರ್ಣ ಕಾಡುಗಳಲ್ಲಿ, ತಂಪು ಜವುಳು ಪ್ರದೇಶದ ಅಂಚು ಬದಿಯಲ್ಲಿ ಧಾರಾಳವಾಗಿ ಬೆಳೆಯುವುದು. ಜಲಪಾತದ ಕಲ್ಲುಬಂಡೆಗಳ ಅಕ್ಕಪಕ್ಕಗಳಲ್ಲಿ, ಜರಿಯ ಅಂಚುಗಳಲ್ಲಿ ಗುಂಪಾಗಿ ಕಾಣಿಸುವುದು.

ಜನರು ಅಲಂಕಾರಿಕ ಗಿಡವಾಗಿ ಬಳಸುವರು. ಲಂಬವಾಗಿ ಎರಡು ಮೂರು ಅಡಿ ಎತ್ತರ ಬೆಳೆಯುವುದು. ಕಾಂಡದ ಅಕ್ಕಪಕ್ಕದಲ್ಲಿ ನಾಗಮುರಿಯಂತೆ ಅಲ್ಲಲ್ಲಿ ಮುರುಟಿದ ಉದ್ದನೆಯ ಎಲೆಗಳು ಇರುತ್ತದೆ. ಎಲೆಗಳ ಮೇಲ್ಭಾಗ ಹೊಳಪಿನಿಂದ ಕೂಡಿದೆ. ಅಡಿ ಭಾಗವು ಮೃದುವಾಗಿ ತುಪ್ಪಳದಂತಿದೆ. ಗಿಡದ ಬುಡದಲ್ಲಿ ಗಡ್ಡೆಯನ್ನು ಹೊಂದಿರುವುದು. ಗಾತ್ರದಲ್ಲಿ ಮುಷ್ಠಿ ಆಕಾರದಲ್ಲಿ, ಅದಕ್ಕಿಂತಲೂ ದೊಡ್ಡದಾಗಿಯೂ ಹಲವಾರು ಗಡ್ಡೆಗಳು ಸುತ್ತಲೂ ಹರಡಿರುತ್ತವೆ. ಬಿಳಿವರ್ಣದ ಈ ಗಡ್ಡೆಯ ಭಾಗ ಔಷಧವಾಗಿ ಬಳಕೆಯಲ್ಲಿದೆ.

ಸುಮಾರು ಸೆಪ್ಟೆಂಬರ್ ತಿಂಗಳಿನಿಂದ ಡಿಸೆಂಬರ್‌ವರೆಗೆ ಚಿಗುರೊಡೆದು ಬೆಳೆದು ಹೂವನ್ನು ಬಿಡುತ್ತದೆ. ಹೂವು ಬಿಳಿಯ ವರ್ಣದ್ದು. ಆಕರ್ಷಕವಾಗಿ ಸ್ವಲ್ಪ ಭಾಗಿದಂತಿರುವ ಹೂವು ಅರ್ಧವೃತ್ತಾಕಾರವನ್ನು ಹೋಲುತ್ತದೆ. ಹೂವಿನ ದಳಗಳ ಕೊಳವೆಯ ಉದ್ದ ಎರಡರಿಂದ ಮೂರು ಸೆಂಟಿಮೀಟರ್. ದಳಗಳ ರಚನೆಯಲ್ಲಿ, ಬಣ್ಣಗಳಲ್ಲಿ ವಿಭಿನ್ನವಾಗಿರುವುದು. ಮೂರು ಹಾಲೆಗಳುಳ್ಳ ಇದನ್ನು ತುಟಿ ಎಂದು ಕರೆಯುವರು. ಹೂವಿನ ದಳಗಳ ಮೇಲೆ ಹಳದಿ ಬಣ್ಣದ ಪಟ್ಟೆಗಳಿವೆ. ಇದರ ಬುಡದಲ್ಲಿ ಚಿಕ್ಕ ಚಿಕ್ಕ ರೋಮಗಳಿವೆ. ಹೂವನ್ನು ಗಮನಿಸಿದಾಗ ಒಂದೇ ಒಂದು ಕೇಸರ ಇರುವುದು ಕಂಡುಬಂತು. ಈ ಸಸ್ಯದ ಕಾಂಡವು ನೊರೆಕಾರಕ ರಾಸಾಯನಿಕ ಗುಣಗಳನ್ನು ಹೊಂದಿದೆ.

### ಆಯುರ್ವೇದದಲ್ಲಿ:

ಹಲವು ಆಯುರ್ವೇದ ಔಷಧಗಳಲ್ಲಿ ಇದರ ಗಡ್ಡೆಯ ಭಾಗವನ್ನು ಬಳಸಿರುವರು. ಪ್ರಮುಖವಾಗಿ ಅಗಸ್ತ್ಯ ರಸಾಯನ, ಕುಮಾರಿಯಾಸವ, ನಾರಾಯಣ ತೈಲ, ರಾಸನಾದಿ ಚೂರ್ಣ, ಹಲವು ಬಗೆಯ ಘೃತ ಹೀಗೆ ಪ್ರಮುಖ ಔಷಧಗಳನ್ನು ತಯಾರಿಸಿದ್ದಾರೆ.

ಕೆಲವು ಪ್ರಮುಖ ಔಷಧಗಳು ಹೀಗಿವೆ. ಅಗಸ್ತ್ಯ ರಸಾಯನವು ದಮ್ಮು, ಕೆಮ್ಮು ನಿವಾರಕ. ಅಗಸ್ತ್ಯ ಹರಿತಕಿ ಎಂಬ ರಸಾಯನವು ಕಠಿಣವಾದ ಗೂರಲು ಹಾಗೂ ಉಸಿರಾಟದ ತೊಂದರೆಗಳನ್ನು ಹೋಗಲಾಡಿಸುವುದು. ಇದರಲ್ಲಿ ವಿರೇಚಕ ಗುಣವೂ ಇದೆ.

ಇದರಿಂದ ತಯಾರಿಸಿದ ಕುಮಾರಿ ಆಸವವು ಸ್ತ್ರೀಯರ ಅತಿಯಾದ ಯೋನಿ ಸ್ರಾವವನ್ನು ನಿವಾರಿಸಿ ಮೂತ್ರ ದೋಷಕ್ಕೆ ಪರಿಹಾರ ನೀಡುವುದು. ಧನ್ವಂತರಿ ಘೃತವು ಗರ್ಭಕೋಶದ ತೊಂದರೆ ನೀಗಿಸಿ, ಶಕ್ತಿವರ್ಧಕದಂತೆ ಕೆಲಸ ಮಾಡುವುದು. ಗಡ್ಡೆಯಿಂದ ತಯಾರಿಸಿದ ಚೂರ್ಣಗಳು ಸೇವಿಸಲು, ತೈಲಗಳು ದೇಹದ ಹೊರಭಾಗಗಳಿಗೆ ಉಪಯುಕ್ತವಾಗಿದೆ. ಇಂತಹ ತೈಲಗಳು ನರ ಸಂಬಂಧಿ, ತಲೆನೋವು, ಜ್ವರ, ಚರ್ಮರೋಗ, ಮಲೇರಿಯಾದಂತಹ ವಿವಿಧ ಕಾಯಿಲೆಗಳಿಗೆ ಸಿದ್ಧಗೊಳಿಸಿದ್ದಾರೆ.

ಇದರಲ್ಲಿರುವ ಕಂದುಬಣ್ಣದ ಬೇರಿಗೆ ಗರ್ಭಕೋಶವನ್ನು ಉದ್ದೀಪನಗೊಳಿಸುವ ಶಕ್ತಿ ಇದೆ. ಇದರ ಗಡ್ಡೆಯಿಂದ ತೆಗೆದ ರಸ ಹಾಗೂ ಮದ್ಯಸಾರ ಬಳಸಿ ಶುದ್ಧಗೊಳಿಸಿದ ಸತ್ವವನ್ನು ಉಪಯೋಗಿಸಿ ಹೆರಿಗೆ ಚೋಧಕವಾಗಿ ಬಳಸುವರು. ಸತ್ವಗೊಳಿಸಿದ ಚೂರ್ಣ ಬಂಜೆತನ ಅಲ್ಲದೇ ಆಮವಾತ, ಊತದಂತ ಕಾಯಿಲೆಗಳನ್ನು ನಿವಾರಿಸುವುದು.

ಗಿಡದ ಕಾಂಡದಿಂದ ತಯಾರಿಸಿದ ಸತ್ವವು ಕೊಬ್ಬು ಹಾಗೂ ಸಕ್ಕರೆಯನ್ನು ನಿಯಂತ್ರಿಸುವುದು. ರಕ್ತದೊತ್ತಡ, ನಾಡಿ ಬಡಿತವನ್ನು ತಹಬದಿಗೆ ತರುವುದು. ಕಾಂಡದ ರಸವನ್ನು ಬಿಸಿ ಮಾಡಿ ದೇಹದ ಮೇಲೆ ಎದ್ದ ಗುಳ್ಳೆಗಳಿಗೆ ಲೇಪಿಸುವರು. ಗಾಯಗಳು ಒಣಗಲು ಸಹಕರಿಸುವುದು.

### ಆಹಾರವಾಗಿ:

ಮಳೆಗಾಲದಲ್ಲಿ ಹುಲುಸಾಗಿ ಬೆಳೆಯುವ ಈ ಗಿಡದ ಎಳೆಯ ಎಲೆಗಳನ್ನು ಮೊಳಕೆ ತರಿಸಿದ ವಿವಿಧ ಕಾಳುಗಳ ಜತೆ ಸೇರಿಸಿ ಪಲ್ಯ ಮಾಡಬಹುದು. ಇದು ದೋಸೆ, ರೊಟ್ಟಿ, ಅನ್ನದೊಂದಿಗೆ ಚೆನ್ನಾಗಿರುತ್ತದೆ. ಇದರ ತಂಬುಳಿ ಊಟಕ್ಕೆ ಬಲು ರುಚಿ.

ಇದರ ಗಡ್ಡೆ ಹಾಗೂ ಸಿದ್ಧ ಔಷಧಗಳನ್ನು ಬಳಸುವಾಗ ತಜ್ಞ ಆಯುರ್ವೇದ ಪಂಡಿತರನ್ನು ಸಂಪರ್ಕಿಸುವುದು ಅಗತ್ಯ. ಅಡುಗೆಯಲ್ಲಿ ಬಳಸುವಾಗ ನೀರಿನಲ್ಲಿ ಶುದ್ಧೀಕರಿಸಿ, ಬೇಯಿಸಿ ಬಳಸಬೇಕು.

